ಓ:ಎಸ್:ನಂ.250/2015

ಪಿ.ಡಬ್ಲ್ಯೂ- 1

ದಿಃ 29-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಹೆಚ್.ವಿ.ಎಂ. ವಕೀಲರಿಂದ

ನಮ್ಮ ತಂದೆ ತಾಯಿಗಳು ಮರಣ ಹೊಂದಿದಾಗ ನನಗೆ ಸುಮಾರು 3 ವರ್ಷಗಳಾಗಿರಬಹುದು. ನನ್ನ ತಮ್ಮನಿಗೆ ಆಗ ವಯಸ್ಸು ಸುಮಾರು 6 ತಿಂಗಳ ವಯಸ್ಸಾಗಿತ್ತು. ವಾದ ಪತ್ರದಲ್ಲಿ ಈ ದಾವೆಯ 7ನೇ ಕಂಡಿಕೆಯಲ್ಲಿ ನಾನು ಮತ್ತು ನನ್ನ ತಮ್ಮ ನಮ್ಮ ಅಜ್ಜಿಯಾದ ಬದ್ರಮ್ಮನ ಮನೆಯಲ್ಲಿ ವಾಸವಾಗಿದ್ದೇವೆ ಎಂದು ಬರೆಸಿದ್ದೇವೆ ಎಂದರೆ ಸರಿಯಲ್ಲ. ಬದ್ರಮ್ಮನಿಗೆ ದೇವಮ್ಮ, ರತ್ನಮ್ಮ, ವಸಂತ, ಶಂಕರಯ್ಯ, ಬದ್ರಮ್ಮ, ಸಿದ್ದಪ್ಪ, ಗಂಗಪ್ಪ ಎಂಬ ಮಕ್ಕಳಿದ್ದರು ಎಂದರೆ ಸರಿಯಲ್ಲ. ಹೆಬ್ಬೆ ಗ್ರಾಮದಲ್ಲಿ ದೇವಮ್ಮ, ರತ್ನಮ್ಮ, ವಸಂತ, ಶಂಕರಯ್ಯ, ಬದ್ರಮ್ಮ, ಸಿದ್ದಪ್ಪ, ಗಂಗಪ್ಪರವರಿಗೆ ಮನೆಗಳು ಇವೆ ಎಂದರೆ ಸರಿ . ಸದರಿ ಮನೆಗಳನ್ನು ಭದ್ರಾ ಅಭಯಾರಣ್ಯ ಯೋಜನೆಯಡಿಯಲ್ಲಿ ಸರ್ಕಾರ ವಶಪಡಿಸಿಕೊಡ ನಂತರ ಸರ್ಕಾರದಿಂದ ಮನೆಗಳು ಮಂಜೂರಾಗಿದೆ ಎಂದರೆ ಸರಿ . ಬದ್ರಮ್ಮನ ಮನೆಯನ್ನು ಸರ್ಕಾರ ವಶಪಡಿಸಿಕೊಂಡಿರುವ ಬಾಬ್ತು ನನಗೆ ಮತ್ತು ನನ್ನ ತಮ್ಮನಿಗೆ ಎಂ.ಸಿ.ಹಳ್ಳಿ ಯಲ್ಲಿ ಒಂದು ಮನೆ ಮತ್ತು ಜಮೀನು ನನಗೆ ಪರಿಹಾರ ಬಂದಿರುತ್ತದೆ ಪರಿಹಾರದ ಹಣವನ್ನು ನಾನೇ ಪಡೆದಿರುತ್ತೆನೆ ಎಂದರೆ ಸರಿಯಲ್ಲ. ನಾನು ಹೆಬ್ಬೆ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದು ದಾಖಲೆಗಳನ್ನು ಹಾಜರುಪಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವುದಕಿಂತ ಮುಂಚೆ ದಾವಾ ಆಸ್ತಿಯನ್ನು ಸತೀಶ್ ಗೌಡರವರಿಗೆ ಗುತ್ತಿಗೆ ನೀಡಿದ್ದೇನೆ ಎಂದರೆ ಸರಿ . ಆ ಸಮಯದಲ್ಲಿ ನನ್ನ ತಮ್ಮನಾದ ಪ್ರತಿವಾದಿಯು ಸತೀಶ್ ಗೌಡರನ್ನು ಕುರಿತು ದಾವಾ ಸರ್ವೇ ನಂ. 14 ಗುಂಟೆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿದ್ದೇನೆ ನೀವು ನನಗೆ ತೊಂದರೆ ಕೊಡಬಾರುದುಎಂದಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02.08.2015 ರಂದು ಸತೀಶ ಗೌಡರವರು ಪ್ರತಿವಾದಿಯ 14 ಗುಂಟೆ ಜಮೀನಿಗೆ ಪ್ರತಿವಾದಿಗೆ ತೊಂದರೆ ಕೊಡುವುದಿಲ್ಲ ಎಂಬುದಾಗಿ ಹೇಳಿಕೆಯನ್ನು ಪೊಲೀಸರಿಗೆ ನೀಡುರುತ್ತೇನೆ ಹಾಗೂ ಆ ಸಮಯದಲ್ಲಿ ನಾನು ಸಹ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ಸಿದ್ರಾಮಪ್ಪ ಎಂದರೆ ಸರಿ . ನಾನು ನನ್ನ ಮತದಾರರ ಚೀಟಿ ಮತ್ತು ಪಡಿತರ ಚೀಟಿಯಲ್ಲಿ ನನ್ನ ಹೆಂಡತಿ ಹೆಸರು ಮೀನಾಕ್ಷಿ ಸೇರಿಸಲು ಅರ್ಜಿಯನ್ನು ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ದಾಖಲೆಗಳು ಇವೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯ ಸರ್ವೇ ನಂಬರ್ ನಲ್ಲಿ 14ಗುಂಟೆ ಜಮೀನಿನಲ್ಲಿ ಈ ನ್ಯಾಯಾಲಯದಿಂದ ಮದ್ಯಂತರ ಆದೇಶ ಆಗುವ ತನಕ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಬದ್ರಮ್ಮನಿಗೆ ಸೇರಿದ್ದ ಆಸ್ತಿ ಆಗಿದ್ದು ಸದರಿ ಆಸ್ತಿಯಲ್ಲಿ ಆಕೆಯ ಮಕ್ಕಳಿಗೂ ಸಹ ಪಾಲು ಇದೆ ಎಂದರೆ ಸರಿಯಲ್ಲ. ಹೆಬ್ಬೆ ಗ್ರಾಮಕ್ಕೆ ಸೇರಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯಾಂಶ

ತಿಳಿಯುತ್ತೇವೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಬದ್ರಮ್ಮನ ಆಸ್ತಿಯನ್ನು ಲಪಟಾಯಿಸಲು ನಾನು ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/xxx

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ರವರು,ತರೀಕೆರೆ.